ಚಿಗಟೇರಿ ಸಾರ್ವಜನಿಕ ಆಸ್ಪತ್ರೆ

ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಔಷಧಿ ಸಾಮಗ್ರಿಗಳು, ಸಿಬ್ಬಂದಿ ವರ್ಗ ಸಲಕರಣೆ ಇತ್ಯಾದಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ''ಕ್ಷ'' ಕಿರಣ ಯಂತ್ರ ಐದು ತಿಂಗಳಿಂದ ದುರಸ್ತಿಯಾಗಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಇವುಗಳ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ''ಡಿ'' ವರ್ಗದ ಸಿಬ್ಬಂದಿಯನ್ನು ಹೊರತುಪಡಿಸಿ ಇನ್ನಿತರ ಸಿಬ್ಬಂದಿಯ ವರ್ಗದ ಕೊರತೆ ಇರುವುದಿಲ್ಲ. ಆಯಮ್ಮಯದ ಅನುಗುಣಕ್ಕೆ ತಕ್ಕಂತೆ ಔಷಧ ಸಲಕರಣೆ ಒದಗಿಸಲಾಗುತ್ತಿದೆ.

ಆ) ಬಂದಿದೆ.

ಇ) ದುರಸ್ತಿ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ವೈ. ಎಂ. ವೀರಣ್ಣ.— ತವಂಗ ತಿಳಿದಿರುವಂತೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರ ಗಮನಕ್ಕೆ ಮುಖ್ಯವಾಗಿ ಆಗಬೇಕಾದಂತಹ ಕೆಲವಾರು ಬೇಡಿಕೆಗಳನ್ನು ತಮ್ಮ ಮುಂಪಾಂತರ ತರಬಯಸುತ್ತೇನೆ. ಆ ಉದ್ದೇಶದ ಸಲುವಾಗಿಯೇ ಈ ಪ್ರಶ್ನೆಯನ್ನು ಕಳುಹಿಸಿದ್ದೇನೆ. ದಾವಣಗೆರೆ ಒಂದು ದೊಡ್ಡ ಪಟ್ಟಣ. ಅಲ್ಲಿ ಒಂದು ದೊಡ್ಡ ಆಸ್ಪತ್ರೆ ಇದೆ. ಅಲ್ಲಿನ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ದಿನೇ ದಿನೇ ಸಹಸ್ರಾರು ಸಂಖ್ಯೆಯಲ್ಲಿ ಬಡವರು ಬರುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಹೊರ ರೋಗಿಗಳೂ ಬರುತ್ತಿರುವ ಪರಿಸ್ಥಿತಿ ಇದೆ. ಆದರೆ ಔಷಧಿ ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಆಗುತ್ತಿಲ್ಲ. ಪರೀಕ್ಷಾ ಘಟಕಗಳೂ ಕೂಡ ಇಲ್ಲದೆ ಬಹಳ ತೊಂದರೆಯಾಗಿದೆ. ಮುಖ್ಯವಾದ ಇನ್ನೊಂದು ವಿಶೇಷವೇನೆಂದರೆ ಅಲ್ಲಿನ ಆಸ್ಪತ್ರೆ ನೌಕರರಿಗೆ ೩೦ ವರ್ಷಗಳ ಹಿಂದೆ ಒಂದು ದೊಡ್ಡ ನಿವೇಶನವನ್ನು ದಾವಣಗೆರೆ ನಗರ ಸಭೆಯವರು ಮನೆಕಟ್ಟುವ ಸಲುವಾಗಿ ಮಂಜೂರು ಮಾಡಲಾಗಿದೆ. ಸಿಬ್ಬಂದಿ ವರ್ಗದವರಿಗೆ ಮನೆಗಳನ್ನು ಹಂತ ಹಂತವಾಗಿ ಕಟ್ಟಿಕೊಡಬೇಕೆಂಬುದು ಅದರ ಮೂಲ ಉದ್ದೇಶ. ಆದರೆ ಇದುವರೆವಿಗೂ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಇದರ ಜೊತೆಗೆ ಕೀಲು ಮತ್ತು ಮೂಳೆ ರೋಗಿಗಳು ಹೆಚ್ಚಾಗಿ ಬರುತ್ತಿದ್ದು ಅವರಿಗೆ ಪ್ರತ್ಯೇಕವಾದ ವಾರ್ಡಗಳೂ ಸಹ ಇಲ್ಲ. ಇದನ್ನು ಕಳೆದ ಡಿಸೆಂಬರ್ ತಿಂಗಳಲ್ಲಿ ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಸ್ವತಃ ಅವರ ಗಮನಕ್ಕೆ ತಂದು ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದೆ. ಜೊತೆಗೆ ಸುಟ್ಟ ಗಾಯಗಳಿಂದ ಅನೇಕ ಆಸ್ಪತ್ರೆಗಳಾಗಿದ್ದು, ಅವರ ಚಿಕಿತ್ಸೆಗೆ ಸರಿಯಾದ ವ್ಯವಸ್ಥೆ ಇಲ್ಲ. ಅವರಿಗೆ ಪ್ರತ್ಯೇಕವಾದ ವಾರ್ಡ್‌ಗಳೂ ಸಹ ಇಲ್ಲ. ಅವುಗಳನ್ನು ನಿರ್ಮಾಣ ಮಾಡಬೇಕಾಗಿದೆ. ಜೊತೆಗೆ ಅಲ್ಲಿರತಕ್ಕ ಕ್ಷ–ಕಿರಣ ಯಂತ್ರ ಕೂಡ ಹಾಳಾಗಿದ್ದು ಅದನ್ನು ರಿಪೇರಿ ಮಾಡುವ ಬಗ್ಗೆಯೂ ಪ್ರಶ್ನೆ ಕೇಳಿದ್ದೇನೆ. ಅದನ್ನು ಇದುವರೆವಿಗೂ ರಿಪೇರಿ ಮಾಡಿಲ್ಲ. ಇವುಗಳೆಲ್ಲದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಏನೆಂದರೆ ''ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಔಷಧಿ ಸಾಮಗ್ರಿಗಳು, ಸಿಬ್ಬಂದಿ ವರ್ಗ, ಸಲಕರಣೆ ಇತ್ಯಾದಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ'' ಎಂಬುದಾಗಿ ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಕೊಡಲಾಗಿದೆ. ಅಲ್ಲಿ ಯಾವುದೇ ಹುದ್ದೆಗಳು ಖಾಲಿ ಇಲ್ಲ. ೨೫ ಗ್ರೂಪ್ ''ಡಿ'' ನೌಕರರ ಹುದ್ದೆಗಳು ಮಾತ್ರ ಬಾಕಿ ಇವೆ. ಬಾಕಿ ಎಲ್ಲ ಡಾಕ್ಟರ್ಸ್, ಸಾಫ್ ನರ್ಸ್, ಕ್ಲರ್ಕ್ಸ್ ಈ ರೀತಿ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಕ್ಷ ಕಿರಣ ಯಂತ್ರ ಕಳೆದ ೫ ತಿಂಗಳಿಂದ ಸರಿಯಾಗಿಲ್ಲದಿರುವುದು ನಿಜ. ಅದಕ್ಕೆ ೫ ರಿಂದ ೬೦ ಸಾವಿರ ರೂಗಳ ಬೆಲೆಬಾಳುವ ಒಂದು ಪೈಪ್ ಮಾತ್ರ ಹಾಳಾಗಿದ್ದು ಅಷ್ಟು ಹಣವನ್ನು ಖರ್ಚು ಮಾಡಿ ಅದನ್ನು ರಿಪೇರಿ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ೨೦೦ ಎಂ.ಎ. ೧೫ ಎಂ.ಎ.ನ ಪೋರ್ಟಬಲ್ ಎಕ್ಸ್‌ರೇಗಳು ಸರಿಯಿಲ್ಲದಿದ್ದರೂ ಅಂತಹ ತೊಂದರೆ ರೋಗಿಗಳಿಗೆ ಆಗಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವೈ. ಎಂ. ವೀರಣ್ಣ.— ಸುಮಾರು ೩೦ ವರ್ಷಗಳ ಹಿಂದೆ ನಗರ ಸಭೆಯವರು ಅಲ್ಲಿನ ಒಬ್ಬಂದಿ ವರ್ಗದವರ ಪುನೆಗಳಿಗಾಗಿ ಒಂದು ನಿವೇಶನ ಒಂದನ್ನು ಕೊಟ್ಟಿದ್ದಾರೆ. ಆದನ್ನು ಮೊನ್ನೆ ಆಡಳಿತಾಧಿಕಾರಿಗಳು ಇದ್ದಂತಹ ಸಂದರ್ಭದಲ್ಲಿ ಆ ನಿವೇಶನವನ್ನು ವಾಪಸ್ಸು ಪಡೆಯುವುದಕ್ಕೆ ಪ್ರಯತ್ನ ಪಟ್ಟಿದ್ದರು. ಏಕೆಂದರೆ ಅಲ್ಲಿ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲದೇ ಇರುವುದರಿಂದ ಆದನ್ನು ಏಕೆ ವಾಪಸ್ಸು ತೆಗೆದುಕೊಳ್ಳಬಾರದೆಂದು ನಿರ್ಧಾರ ಮಾಡಿದ್ದರು. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ನಿವೇಶನವನ್ನು ಖಾಲಿ ಬಿಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ತೆಗೆದು ಕೊಂಡಿದೆ ಎಂಬುದರ ಬಗ್ಗೆ ಮಾನ್ಯ ಸಚಿವರು ಸಮಂಜಸವಾದ ಉತ್ತರ ಕೊಟ್ಟರೆ ಸರಿಹೋಗುತ್ತದೆಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.— ನೀವು ಸಮಂಜಸವಾದ ಪ್ರಶ್ನೆಯನ್ನು ಕೇಳಿಲ್ಲ. ಸಮಂಜಸವಾದ ಉತ್ತರವನ್ನು ಮಾನ್ಯ ಸಚಿವರು ಹೇಗೆ ಕೊಡುತ್ತಾರೆ ? ಈಗ ನೀವು ಕೇಳುತ್ತಿರುವ ಉಪ ಪ್ರಶ್ನೆಯೇ ಬೇರೆ ಆಗಿದೆ.

ಶ್ರೀಮತಿ ಮನೋರಮಾ ಮಧ್ವರಾಜ್.— ಈ ಬಗ್ಗೆ ಮಾನ್ಯ ಸಣವರು ಬೇರೊಂದು ಪ್ರಶ್ನೆ ಕಳಂಹಿಸಿದರೆ ಅದಕ್ಕೆ ಉತ್ತರ ಒದಗಿಸಲಾಗುವುದು. ಈ ಪ್ರಶ್ನೆಯಲ್ಲಿ ಅದು ಉದ್ಭವಿಸಂವುದಿಲ್ಲ.

ಅಧ್ಯಕ್ಷರು.— ತಾವು ಮುಂದಿನ ಸಲ ಸರಿಯಾದ ಪ್ರಶ್ನೆಯನ್ನು ಕಳುಹಿಸಿಕೊಡಿ.

ಬಳ್ಳಾರಿ ವೈದ್ಯಕೀಯ ಕಾಲೇಜಿನ ಪ್ರೊಫೆಸರುಗಳಂ

೬೮ ಶ್ರೀ ಎಂ. ರಾಮಪ್ಪ (ಬಳ್ಳಾರಿ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಲೇಜಿನಲ್ಲಿ ಕೆಲಸ ಮಾಡದೇ ವೇತನ ಪಡೆದಿರುವ ಬಳ್ಳಾರಿ ವೈದ್ಯಕೀಯ ಕಾಲೇಜಿನ ಪ್ರೊಫೆಸರ್‌ಗಳ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಆ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಸಹ ನಿರ್ದೇಶಕರು ವೈದ್ಯಕೀಯ ಶಿಕ್ಷಣ ಬೆಂಗಳೂರು ಇವರು ಈ ವಿಚಾರದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ. ಅವರ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ರಾಮಪ್ಪ.— ಹೋದ ಸಲ ನಡೆದ ಅಧಿವೇಶನದಲ್ಲಿ ಇದೇ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಯಾರ್ಯಾರು ಸರಿಯಾಗಿ ಕೆಲಸ ಮಾಡದೆ ಸಂಬಳವನ್ನು ತೆಗೆದುಕೊಂಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದರು. ಆದರೆ ಇಲ್ಲಿಯವರೆವಿಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಅವರ ಮೇಲೆ ಕ್ರಮವನ್ನೇ ತೆಗೆದುಕೊಂಡಿಲ್ಲ. ಅಮೇಲೆ ಕೆಲವರ ಬಗ್ಗೆ ಹೇಳಬೇಕಾದರೆ ಕೆಲವು ಡಾಕ್ಟರ್ಸ್‌ಗಳು ಪೋರದೇಶಕ್ಕೆ ಹೋಗಿದ್ದಾರೆ, ಅವರ ಮೇಲೂ ಏನು ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಯಾರನ್ನು ಕೇಳಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಇದರ ಬಗ್ಗೆ ಏನು ಸೂಕ್ತ ಕ್ರಮ ತೆಗೆದುಕೊಂಡಿದ್ದೀರಿ ? ಯಾವಾಗ ತೆಗೆದುಕೊಂಡಿದ್ದೀರಿ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಎಂದರೆ ಪ್ರೊಫೆಸರ್‌ಗಳ ಬಗ್ಗೆ ಪ್ರೊಫೆಸರ್‌ಗಳ ವೈಕಿ ಕೆ. ಚಂದ್ರಶೇಖರ ರಾವ್ ಎನ್ನುವವರ ಬಗ್ಗೆ ಬಹಳ ಯಥೇಚ್ಛವಾದ ದೂರುಗಳು ಬಂದಿರುತ್ತವೆ ಈ ಬಗ್ಗೆ ಇಲಾಖೆಯ ಜಂಟಿ ನಿರ್ದೇಶಕರು ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ ಇನ್ನೂ ಇಲಾಖೆಯ ಪರವಿಂದ ಎನ್‌ಕ್ವೈರಿ ಆಗಬೇಕಾಗಿದೆ. ಈ ವೈದ್ಯರು ಬೇರೆ ರಾಷ್ಟ್ರದಲ್ಲಿದ್ದಾರೆಂದು ಹೇಳಿದ್ದಾರೆ. ನಾವು ಇಂಥ ದೂರುಗಳ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದು ಏನೆಂದರೆ ಯಾರು ೧೦ ವರ್ಷಕ್ಕಿಂತಲೂ ಹೆಚ್ಚುಕಾಲ ಕೆಲಸಕ್ಕೆ ಗೈರುಹಾಜರಾಗುತ್ತಾರೆ ಅವರನ್ನು ಕೂಡಲೇ ಕೆಲಸದಿಂದಲೇ ತೆಗೆದುಹಾಕಬೇಕು ಎಂದು ಒಂದು ನಿರ್ಣಯಕ್ಕೆ ಬಂದಿದ್ದೇವೆ.

ಶ್ರೀ ಎಂ. ರಾಮಪ್ಪ.—ವೈದ್ಯಕೀಯ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು ಈ ಬಗ್ಗೆ ತನಿಖೆ ನಡೆಸಿ ಒಂದು ವರದಿಯನ್ನು ಕೊಟ್ಟಿದ್ದಾರೆ, ಇಲಾಖೆಯ ವತಿಯಿಂದ ಎನ್‌ಕ್ವೈರಿ ಆದಕೂಡಲೇ